ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ಡಿ ಎಸ್ ಇ ಆರ್ ಟಿ
DSERT

THE DEPARTMENT OF STATE EDUCATION RESEARCH AND TRAINING
NO 4, 100 FT RING ROAD, BANASHANKARI 3RD STAGE
BANGALORE 560 085

TEL NO: 26422372, 26422373 26422375
FAX NO: 26422377
E MAIL:dsert@bgl.vsnl.net.in

ದಿನಾಂಕ: 25/04/2009

ಆತ್ಮೀಯ ಶಿಕ್ಷಕರೆ,

**ವಿಷಯ: ಶಿಕ್ಷಣದಲ್ಲಿ ತಂತ್ರಜ್ಞಾನ ಪ್ರಶಸ್ತಿಗಳ ಕುರಿತು**

ನಮ್ಮ ರಾಜ್ಯದಲ್ಲಿ Intel® Teach Program ತರಬೇತಿ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ. ಎರಡು ಸಾವಿರಕ್ಕಿಂತ ಹೆಚ್ಚಿನ ಸರಕಾರಿ ಗಣಕೀಕೃತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಈ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಟ್ಟಿದ್ದು, 23,000ಕ್ಕೂ ಹೆಚ್ಚಿನ ಶಿಕ್ಷಕರು ಹಾಗೂ ಕ್ಷೇತ್ರ ಸಂಪನ್ಮೂಲ ಶಿಕ್ಷಕರು ದಿನ ನಿತ್ಯದ ಬೋಧನೆಯಲ್ಲಿ ಕಂಪ್ಯೂಟರ್, ಮಲ್ಟಿಮೀಡಿಯಾ, ಇಂಟರ್‌ನೆಟ್ ತಂತ್ರಜ್ಞಾನದ ಅಳವಡಿಕೆಯ ತರಬೇತಿ ಪಡೆದಿದ್ದಾರೆ.

ಶಿಕ್ಷಣದಲ್ಲಿ ತಂತ್ರಜ್ಞಾನದ ಅಳವಡಿಕೆಯನ್ನು ಪ್ರೋತ್ಸಾಹಿಸಲು ಡಿ.ಎಸ್.ಇ.ಅರ್.ಟಿ., ಸರ್ವ ಶಿಕ್ಷಣ ಅಭಿಯಾನ ಹಾಗು Intel® Teach Program ಸಹಯೋಗದೊಂದಿಗೆ ಗಣಕೀಕೃತ ಶಾಲೆಗಳಿಗೆ ಇಂಟೆಲ್ ತರಬೇತಿ ಪಡೆದ ಸದರಿ ಶಾಲಾ ಶಿಕ್ಷಕರಿಗೆ/ಬಿ.ಆರ್.ಪಿ/ಸಿ.ಅರ್.ಪಿ ಮತ್ತು ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಸ್ಪರ್ಧೆಯ ವಿವರ, ಮಾರ್ಗಸೂಚಿ ಈ ಪತ್ರದ ಜೊತೆ ಲಗತ್ತಿಸಲಾಗಿದೆ. ಆಸಕ್ತ ಶಿಕ್ಷಕರು ವಿವರವಾದ ಪ್ರಾಜೆಕ್ಟ್‌ಗಳನ್ನು ದಿನಾಂಕ Aug 31, 2009 ಒಳಗೆ Intel® Teach Program, # 16, 80 feet road, Koramangala 4th Block, Bangalore 560 034. ಕಛೇರಿಗೆ ತಲಪಿಸಬೇಕು.

ಶಾಲೆಯ ಮುಖ್ಯ ಶಿಕ್ಷಕರು ಈ ಸ್ಪರ್ಧೆಯ ವಿವರಗಳನ್ನು ನೋಟೀಸ್ ಬೋರ್ಡ್‌ಗೆ ಅಂಟಿಸುವುದರ ಮೂಲಕ ಹಾಗೂ ಆಂತರಿಕ ಸಭೆ ಕರೆದು ಎಲ್ಲಾ ಶಿಕ್ಷಕರ ಗಮನಕ್ಕೆ ತರತಕ್ಕದ್ದು. ಪ್ರತಿಯೊಂದು ಶಾಲೆಯಿಂದ ಕನಿಷ್ಠ ಒಬ್ಬರು ಶಿಕ್ಷಕರು, ಒಂದು ಅಥವಾ ಎರಡು ವಿದ್ಯಾರ್ಥಿ ಗುಂಪುಗಳು ಮತ್ತು ಒಟ್ಟಾರೆ ಶಾಲೆಯು ಸಹಿತ ಭಾಗವಹಿಸಲು ಉತ್ತೇಜಿಸಬೇಕು. ಆಸಕ್ತರಾದ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಮುಖ್ಯ ಶಿಕ್ಷಕರು ಸಂಪೂರ್ಣ ಸಹಕಾರ ಮತ್ತು ಬೆಂಬಲ ನೀಡತಕ್ಕದ್ದು.

ಶ್ರೀ ಎಮ್.ಎನ್.ಬೇಗ್
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ., ಬೆಂಗಳೂರು

# ಗಣಕೀಕೃತ ರಾಜ್ಯ ಸರ್ಕಾರಿ ಶಾಲೆಗಳಿಗೆ Intel® Teach Program
## ಸಹಯೋಗದೊಂದಿಗೆ ಡಿ. ಎಸ್. ಇ. ಆರ್. ಟಿ. ಹಾಗು ಸರ್ವ ಶಿಕ್ಷಣ ಅಭಿಯಾನ ನೀಡುವ
## "ಶಿಕ್ಷಣದಲ್ಲಿ ತಂತ್ರಜ್ಞಾನ ಪ್ರಶಸ್ತಿಗಳು"

**ಸ್ಪರ್ಧೆಯ ವಿವರಗಳು: ಗಣಕೀಕೃತ ಶಾಲೆಗಳಿಗೆ ನೀಡಲಾಗುವ ಶಿಕ್ಷಣದಲ್ಲಿ ತಂತ್ರಜ್ಞಾನ ಪ್ರಶಸ್ತಿಗಳಲ್ಲಿ ನಾಲ್ಕು ವಿಭಾಗಗಳಿವೆ:**

| | | | |
|---|---|---|---|
| 1. | ಶಿಕ್ಷಕರ ವೈಯಕ್ತಿಕ ವಿಭಾಗ | : | ತಲಾ ರೂ. 5000/- ಹದಿನೈದು ಬಹುಮಾನಗಳು |
| | ಯೋಜನೆಯ ವಿಷಯಗಳು | : | ಪರಿಸರ ವಿಜ್ಞಾನ –ಮೂರು ಬಹುಮಾನಗಳು |
| | | | ಸಮಾಜ ವಿಜ್ಞಾನ –ಮೂರು ಬಹುಮಾನಗಳು |
| | | | ವಿಜ್ಞಾನ –ಮೂರು ಬಹುಮಾನಗಳು |
| | | | ಗಣಿತ –ಮೂರು ಬಹುಮಾನಗಳು |
| | | | ಭಾಷೆ(ಕನ್ನಡ,ಇಂಗ್ಲೀಷ್,ಹಿಂದಿ)–ಮೂರು ಬಹುಮಾನಗಳು |
| 2. | ಶಾಲಾ ವಿಭಾಗ | : | ತಲಾ ರೂ. 10000/- ಮೂರು ಬಹುಮಾನಗಳು |
| 3. | ವಿದ್ಯಾರ್ಥಿಗಳ ವಿಭಾಗ | : | ತಲಾ ರೂ. 2500/- ಹದಿನೈದು ಬಹುಮಾನಗಳು |
| 4. | ಬಿ.ಆರ್.ಪಿ/ಶಿಕ್ಷಕರ ವಿಭಾಗ | : | ತಲಾ ರೂ. 3000/- ಐದು ಬಹುಮಾನಗಳು |

ಸರ್ವ ಶಿಕ್ಷಣ ಅಭಿಯಾನ ಮತ್ತು ಇಂಟೆಲ್ ಗೆಟ್ಟಿಂಗ್ ಸ್ಟಾರ್ಟಡ್ ತರಬೇತಿ ಪಡೆದ ಬಿ.ಆರ್.ಪಿ/ ಪ್ರಾಥಮಿಕ ಶಾಲಾ ಶಿಕ್ಷಕರಿಗೆ.

**ಶಿಕ್ಷಕರ ವೈಯಕ್ತಿಕ ವಿಭಾಗ:** ದಿನ ನಿತ್ಯದ ಬೋಧನೆ ಹಾಗೂ ಕಲಿಕೆಯಲ್ಲಿ ತಂತ್ರಜ್ಞಾನದ (ಕಂಪ್ಯೂಟರ್, ಮಲ್ಟಿಮೀಡಿಯಾ, ಇಂಟರ್‌ನೆಟ್ ಇತ್ಯಾದಿ) ಸಾರ್ಥಕ ಬಳಕೆಯ ಆಧಾರದ ಮೇಲೆ ಈ ಸ್ಪರ್ಧೆಯಲ್ಲಿ ಬಹುಮಾನವನ್ನು ನೀಡಲಾಗುತ್ತದೆ. Intel® Teach Program ತರಬೇತಿಯಲ್ಲಿ ಭಾಗವಹಿಸಿರುವ ಎಲ್ಲಾ ಶಿಕ್ಷಕರೂ ಈ ಸ್ಪರ್ಧೆಗೆ ಅರ್ಹರಾಗಿರುತ್ತಾರೆ.

**ಶಿಕ್ಷಕರ ವೈಯಕ್ತಿಕ ವಿಭಾಗದ ಸ್ಪರ್ಧೆಯಲ್ಲಿ ಭಾಗವಹಿಸಲು ಮಾರ್ಗಸೂಚಿಗಳು**

- ❖ ಪ್ರತಿಯೊಬ್ಬ ಶಿಕ್ಷಕರು ಒಂದು ಘಟಕ ಅಥವಾ ಪಾಠಕ್ಕೆ ಸಂಬಂಧಿಸಿದಂತೆ ವಿಜ್ಞಾನ, ಗಣಿತ, ಪರಿಸರ ವಿಜ್ಞಾನ, ಸಮಾಜ ವಿಜ್ಞಾನ ಹಾಗು ಭಾಷೆಯ ಕನಿಷ್ಠ ಒಂದು ಅಥವಾ ಗರಿಷ್ಠ ಎರಡು Intel ® Teach Program ಆಧಾರಿತ ಪ್ರಾಜೆಕ್ಟ್‌ಗಳನ್ನು ರಚಿಸಿ, ತರಗತಿಯಲ್ಲಿ ಅಳವಡಿಸತಕ್ಕದ್ದು.
- ❖ ಸ್ಪರ್ಧೆಗೆ ಕಳುಹಿಸಲಾಗುವ ಪ್ರಾಜೆಕ್ಟ್, ಈ ಕೆಳಕಂಡ ದಾಸ್ತಾವೇಜುಗಳನ್ನು ಒಳಗೊಂಡಿರಬೇಕು: ಪ್ರಾಜೆಕ್ಟ್ ಪ್ಲಾನ್ ಟೆಂಪ್ಲೇಟ್, ಶಿಕ್ಷಕ ಬಹುಮಾಧ್ಯಮ ಪ್ರಸ್ತುತಿ, ಮೌಲ್ಯಮಾಪನ ಸಾಧನ, ಪ್ರಾಜೆಕ್ಟ್ ಕಾರ್ಯ ನಿರ್ವಹಣಾ ಯೋಜನೆ ಮತ್ತು ವಿದ್ಯಾರ್ಥಿ ಬಹುಮಾಧ್ಯಮ ಪ್ರಸ್ತುತಿಗಳು.
- ❖ ಈ ಎಲ್ಲಾ ದಸ್ತಾವೇಜುಗಳ ಮುದ್ರಿತ ಪ್ರತಿ (Print Out) ಗಳನ್ನು 31st Aug, 2009 ಒಳಗೆ Intel® Teach Program ಗೆ ಕಳುಹಿಸತಕ್ಕದ್ದು.
- ❖ ಪ್ರಾಜೆಕ್ಟ್‌ಗಳು ವಿದ್ಯಾರ್ಥಿಗಳಲ್ಲಿ ಸಂಯೋಜನಾತ್ಮಕ ಅಧ್ಯಯನ, ಸಂಶೋಧನೆ ಹಾಗೂ ಸಂವಹನವನ್ನು ಪ್ರೇರೇಪಿಸಬೇಕು.
- ❖ ತಂತ್ರಜ್ಞಾನದ ಬಳಕೆ ವಿವಿಧ ಕಲಿಕಾ ಮಟ್ಟದ ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿರಬೇಕು.
- ❖ ಪ್ರಾಜೆಕ್ಟ್‌ಗಳನ್ನು CD-ROM ಹಾಗೂ DVD-ROMಗಳಲ್ಲಿ ಕಳುಹಿಸುವುದು ಶಿಕ್ಷಕರ ಆಯ್ಕೆಗೆ ಬಿಟ್ಟಿದ್ದು.

**ಶಾಲಾ ವಿಭಾಗ :** ಈ ಸ್ಪರ್ಧೆಯಲ್ಲಿ ಭಾಗವಹಿಸಲು ಶಾಲೆಯ ಶೇ. 75% ಶಿಕ್ಷಕರು ತರಬೇತಿಯನ್ನು ಪಡೆದಿರಬೇಕು. ಕನಿಷ್ಠ ಮೂರು ಶಿಕ್ಷಕರು ತಂತ್ರಜ್ಞಾನ ಆಧಾರಿತ ಪ್ರಾಜೆಕ್ಟನ್ನು ರಚಿಸಿ, ತರಗತಿಯಲ್ಲಿ ಅಳವಡಿಸತಕ್ಕದ್ದು. ಈ ಮೂರು ಪ್ರಾಜೆಕ್ಟ್‌ಗಳನ್ನು 31st Aug, 2009 ರೊಳಗೆ Intel® Teach Program ಕಛೇರಿಗೆ ಸಲ್ಲಿಸಬೇಕು.

**ಶಾಲಾ ವಿಭಾಗದ ಸ್ಪರ್ಧೆಯ ನಿಯಮಾವಳಿಗಳು:**

**ಪ್ರವೇಶದ ಪತ್ರಗಳು ಈ ಕೆಳಕಂಡ ಅಂಶಗಳೊಂದಿಗೆ ಒಂದು ಅಧ್ಯಯನದ ಸ್ವರೂಪದಲ್ಲಿರತಕ್ಕದ್ದು:**

- ಶಾಲಾ ಹಿನ್ನಲೆಯ ಮಾಹಿತಿ
- ತಂತ್ರಜ್ಞಾನದ ಅನುಷ್ಠಾನಕ್ಕೆ ಮುನ್ನ ಶಾಲೆಯಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆಯ ಸ್ವರೂಪ.
- ಶೈಕ್ಷಣಿಕ ಪಠ್ಯಕ್ರಮದಲ್ಲಿ ತಂತ್ರಜ್ಞಾನ ಅಳವಡಿಕೆಯ ಸಮಗ್ರ ಮಾಹಿತಿ.
- ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಶಾಲೆಯ ಸಿದ್ಧತೆ: ಅಧ್ಯಾಪಕರ ತರಬೇತಿ, ವಿದ್ಯಾರ್ಥಿಗಳ ತರಬೇತಿ.
- ತುರ್ತು ಹಾಗೂ ಭವಿಷ್ಯದ ಅವಶ್ಯಕತೆಗಳಿಗೆ ಶಾಲೆಯ ಸಂಪನ್ಮೂಲಗಳ ಬಳಕೆಯ ಸಾಧ್ಯತೆಗಳು.

- ಶಾಲೆಯಲ್ಲಿ ತಂತ್ರಜ್ಞಾನ ಅಳವಡಿಕೆ ವಿಧಾನ
- ಅನುಷ್ಠಾನದಲ್ಲಿ ಅಧ್ಯಾಪಕರ ಪಾತ್ರ ಮತ್ತು ಮುಖ್ಯ ಅಧ್ಯಾಪಕರ ಪಾತ್ರ
- ವಿದ್ಯಾರ್ಥಿಗಳ ಮೇಲೆ ಉಂಟಾದ ಪ್ರಭಾವ ಉದಾ: ಪಠ್ಯ, ಸಹಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಮೇಲುಂಟಾದ ಪ್ರಭಾವಗಳು.
- ಪೋಷಕ ಹಾಗೂ ಇತರ ವರ್ಗಗಳ ತೊಡಗುವಿಕೆ ಹಾಗೂ ಅವರ ಪಾತ್ರ.
- ಪಠ್ಯಕ್ರಮದಲ್ಲಿ ತಂತ್ರಜ್ಞಾನ ವರ್ಧನೆ, ತರಬೇತಿ, ಅನುಷ್ಠಾನ, ಪಠ್ಯಯೋಜನೆಗಳ ಪರಿಶೀಲನೆ ಇತ್ಯಾದಿ.
- ಚಟುವಟಿಕೆಗಳ ಜವಾಬ್ದಾರಿಯ ಹಂಚಿಕೆ.
- ಶಾಲಾ ಆಡಳಿತ ಹಾಗೂ ಶಾಲೆಯ ಇತರ ಚಟುವಟಿಕೆಗಳ ಮೇಲೆ ಉಂಟಾದ ಪರಿಣಾಮ.
- ಭವಿಷ್ಯದಲ್ಲಿ ನಿಮ್ಮ ಶಾಲೆಯ ಶೈಕ್ಷಣಿಕ ಚಟುವಟಿಕೆಗಳಲ್ಲಿ ತಂತ್ರಜ್ಞಾನ ಬಳಕೆಯ ಯೋಜನೆಗಳು

**ವಿದ್ಯಾರ್ಥಿಗಳ ವಿಭಾಗ:** ಸ್ಪರ್ಧೆಯ ತಂತ್ರಜ್ಞಾನದ ಬಳಕೆಯನ್ನು ಆಧಾರಿಸಿದೆ. ಪಠ್ಯಕ್ರಮದ ಮುಖ್ಯ ವಿಷಯಗಳನ್ನು ಕಲಿಯಲು ತಂತ್ರಜ್ಞಾನದಿಂದಾದ (ಕಂಪ್ಯೂಟರ್, ಮಲ್ಟಿಮೀಡಿಯಾ, ಇಂಟರ್‌ನೆಟ್ ಇತ್ಯಾದಿ) ಪ್ರಯೋಜನಗಳನ್ನು ರುಜುವಾತು ಮಾಡಬೇಕಾಗುತ್ತದೆ. 9 ಹಾಗೂ 10ನೇ ತರಗತಿಯ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವುದು. ಒಂದು ಶಾಲೆಯಿಂದ ನಾಲ್ಕು ಪ್ರವೇಶಪತ್ರಗಳಿಗೆ ಅವಕಾಶವಿದೆ.

**ವಿದ್ಯಾರ್ಥಿಗಳ ವಿಭಾಗದ ಸ್ಪರ್ಧೆಯ ನಿಯಮಾವಳಿಗಳು:**

- ವಿದ್ಯಾರ್ಥಿಗಳ ಪ್ರಾಜೆಕ್ಟ್‌ಗಳು ಮಲ್ಟಿಮೀಡಿಯಾ ಪ್ರಸ್ತುತಿಯ ರೂಪದಲ್ಲಿರಬೇಕು.
- ವಿದ್ಯಾರ್ಥಿಯ ಆಯ್ಕೆ ಮಾಡಿಕೊಂಡ ಘಟಕ / ವಿಷಯವು ರಾಜ್ಯ ಸರ್ಕಾರ ನಿಗದಿಪಡಿಸಿದ ಪಠ್ಯಕ್ರಮದ (ವಿಜ್ಞಾನ, ಗಣಿತ, ಪರಿಸರ ವಿಜ್ಞಾನ, ಸಮಾಜ ವಿಜ್ಞಾನ ಹಾಗು ಭಾಷೆ) ಒಂದು ಭಾಗವಾಗಿರತಕ್ಕದ್ದು.
- ಈ ಪ್ರಾಜೆಕ್ಟ್‌ಗಳನ್ನು ವಿದ್ಯಾರ್ಥಿಯು ತಾನೇ ಸಿದ್ದಪಡಿಸಬಹುದು ಅಥವಾ ಒಂದೇ ತರಗತಿಯ ಇಬ್ಬರು ವಿದ್ಯಾರ್ಥಿಗಳು ಸೇರಿ ಅಭಿವೃದ್ಧಿಪಡಿಸಬಹುದು.
- ಸಮರ್ಪಕ ಸಂಶೋಧನೆ, (ಸಂವಹನ, ಉತ್ಪಾದಕತೆಯ ಮಾರ್ಗಗಳು ಹಾಗೂ ಸಲಕರಣೆಗಳ) ನೆರವಿನಿಂದ ಉನ್ನತ ಆಲೋಚನಾ ಕೌಶಲ್ಯವನ್ನು ಬೆಳೆಸಬಲ್ಲ ಪ್ರಶ್ನಧಾರಿತ ಕಲಿಕೆಯ ಕ್ರಮದ ಉಪಯುಕ್ತತೆಯನ್ನು ತಿಳಿಸುವಂತೆ ಪ್ರಾಜೆಕ್ಟ್ ರೂಪಗೊಂಡಿರಬೇಕು.
- ವಿದ್ಯಾರ್ಥಿಗಳು ಮಲ್ಟಿಮೀಡಿಯಾ ಪ್ರಸ್ತುತಿಯನ್ನು CD-ROM ಅಥವಾ DVD-ROM ರೂಪದಲ್ಲಾಗಲಿ ಕಳುಹಿಸಬಹುದು.

**ಸರ್ವಶಿಕ್ಷಣ ಅಭಿಯಾನ/ಇಂಟೆಲ್ ತರಬೇತಿ ಪಡೆದ ಬಿ.ಆರ್.ಪಿ/ಶಿಕ್ಷಕರಿಗೆ:** ದಿನ ನಿತ್ಯದ ಬೋದನೆ ಹಾಗೂ ಕಲಿಕೆಯಲ್ಲಿ ತಂತ್ರಜ್ಞಾನದ (ಕಂಪ್ಯೂಟರ್, ಮಲ್ಟಿಮೀಡಿಯಾ, ಇಂಟರ್‌ನೆಟ್ ಇತ್ಯಾದಿ) ಸಾರ್ಥಕ ಬಳಕೆಯ ಆಧಾರದ ಮೇಲೆ ಈ ಸ್ಪರ್ಧೆಯಲ್ಲಿ ಬಹುಮಾನವನ್ನು ನೀಡಲಾಗುತ್ತದೆ. **ಸರ್ವ ಶಿಕ್ಷಣ ಅಭಿಯಾನ**/Intel® Teach Program ಗೆಟ್ಟಿಂಗ್ ಸ್ಟಾರ್ಟಡ್ ತರಬೇತಿಯನ್ನು ಪಡೆದ ಎಲ್ಲಾ ಬಿ.ಆರ್.ಪಿ/ಸಿ.ಆರ್.ಪಿ/ಪ್ರಾಥಮಿಕ ಶಾಲಾಶಿಕ್ಷಕರೂ ಈ ಸ್ಪರ್ಧೆಗೆ ಅರ್ಹರಾಗಿರುತ್ತಾರೆ.

**ಬಿ.ಆರ್.ಪಿ/ಶಿಕ್ಷಕರ ವಿಭಾಗದ ಸ್ಪರ್ಧೆಯಲ್ಲಿ ಭಾಗವಹಿಸಲು ಮಾರ್ಗಸೂಚಿಗಳು,**

ಪ್ರತಿಯೊಬ್ಬ ಬಿ.ಆರ್.ಪಿ/ಶಿಕ್ಷಕರು ಒಂದು ಘಟಕ ಅಥವಾ ಪಾಠಕ್ಕೆ ಸಂಬಂಧಿಸಿದಂತೆ ವಿಜ್ಞಾನ, ಗಣಿತ, ಪರಿಸರ ವಿಜ್ಞಾನ, ಸಮಾಜ ವಿಜ್ಞಾನ, ಭಾಷೆಯಲ್ಲಿ ಹಾಗೂ ವಿದ್ಯಾರ್ಥಿಗಳ ಕಲಿಕೆಯಲ್ಲಿ ಮಾಡಬಯಸುವ ಬದಲಾವಣೆಗಳನ್ನು ಗುರುತಿಸಿ, ಅನುಷ್ಠಾನಕ್ಕೆ ತರಲು ಮತ್ತು ಆ ಕೆಲಸವನ್ನು ವಿವರಿಸಿ ಹೇಳುವಂತಹ ಹಾಗೂ ಶಿಕ್ಷಕರ ಬೋಧನೆಯಲ್ಲಿ ಮಹತ್ವಪೂರ್ಣ ಬದಲಾವಣೆ ತರಲು ಸಹಾಯ ಮಾಡುವಂತಹ ಪರಿಣಾಮಕಾರಿ **ಕ್ರಿಯಾಯೋಜನೆಯನ್ನು** ತಯಾರಿಸುವುದು.

- ಬಿ.ಆರ್.ಪಿ/ಶಿಕ್ಷಕರ **ಕ್ರಿಯಾಯೋಜನೆಯು** ಮಲ್ಟಿಮೀಡಿಯಾ ಪ್ರಸ್ತುತಿಯ ರೂಪದಲ್ಲಿರಬೇಕು.
- **ಕ್ರಿಯಾಯೋಜನೆಯಲ್ಲಿ ಏನಿರಬೇಕು** ? : ಧ್ಯೇಯಗಳು(ಉದ್ದೇಶ), ಬೋಧನಾ ಕಾರ್ಯತಂತ್ರಗಳು ಮತ್ತು ಕಾರ್ಯಭಾರಗಳು, ಸವಾಲುಗಳು ಮತ್ತು ಪರಿಹಾರಗಳು, ತಿಳುವಳಿಕೆ, ಒಪ್ಪಿಗೆ, ಸಿದ್ಧತೆ, ಕಾರ್ಯರೂಪತೆ, ಹೊಂದಾಣಿಕೆ, ಸಮಯರೇಖೆ ಹಾಗೂ ಸಂಪನ್ಮೂಲಗಳು.
- 21ನೇ ಶತಮಾನ ಕಲಿಕಾ ಪರಿಸರ ಬೆಳಸುವುದು, ತರಗತಿಯಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ಸಹಯೋಗವನ್ನು ಪ್ರೋತ್ಸಾಹಿಸುವುದು, ವಿದ್ಯಾರ್ಥಿ ಕೇಂದ್ರಿತ ತರಗತಿಗಳನ್ನು ಸುಗಮಗೊಳಿಸುವಂತಹ, ಸ್ವ-ನಿರ್ದೇಶನ ಉನ್ನತ ಆಲೋಚನಾ ಕೌಶಲ್ಯವನ್ನು, ಬೆಳೆಸುವಂತಹ ಒಟ್ಟಾರೆ ಶಿಕ್ಷಣದಲ್ಲಿ ತಾವು ಮಾಡಬಯಸುವಂತಹ ಬದಲಾಣೆಯನ್ನು ಹಾಗು ಅನುಷ್ಠಾನ ಗೊಳಿಸುವಂತಹ **ಕ್ರಿಯಾಯೋಜನೆಯೊಂದನ್ನು** ಸಿದ್ದಪಡಿಸಿ ತರಗತಿಯಲ್ಲಿ ಅಳವಡಿಸತಕ್ಕದ್ದು.
- **ಕ್ರಿಯಾಯೋಜನೆಯನ್ನು** ಮುದ್ರಿತ ಪ್ರತಿ(Print Out) ಹಾಗೂ CD-ROM /DVD-ROM ಗಳಲ್ಲಿ 31st Aug, 2009 ರೊಳಗೆ Intel® Teach Program ಕಛೇರಿಗೆ ಸಲ್ಲಿಸಬೇಕು.

**ವಿದ್ಯಾರ್ಥಿಗಳ ವಿಭಾಗ ಸ್ಪರ್ಧೆಯ ವಿವಿಧ ಹಂತಗಳು ಹಾಗು ವೇಳಾಪಟ್ಟಿಯನ್ನು ಕೆಳಗೆ ನೀಡಲಾಗಿದೆ.**

| ಹಂತಗಳು | ಕೊನೆಯ ದನಾಂಕ | ಶಿಕ್ಷಕರು ಮಾಡಬೇಕಾಗಿರುವುದು ಏನು? |
|---|---|---|
| ಹಂತ 1 | 31st Aug, 2009 | ಶಿಕ್ಷಕರ, ಶಾಲೆ ಹಾಗೂ ವಿದ್ಯಾರ್ಥಿಗಳ ವಿವರವಾದ ಪ್ರೊಜೆಕ್ಟ್‌ಗಳು Intel® Teach Program ಕಛೇರಿಗೆ ತಲಪಬೇಕು (# 16, 80 feet road, Koramangalor 4th Block, Bangalore- 560 034. (Ph: Jyotiram: 9980744166 Raghu :9481194913 or Karthik: 9448200444) |
| ಹಂತ 2 | Sep-2009 | ದೂರವಾಣಿ ಸಂದರ್ಶನ ಹಾಗೂ ಶಾಲೆಗಳಿಗೆ ಮೌಲ್ಯಮಾಪಕರ ತಂಡದ ಭೇಟಿ. |
| ಹಂತ 3 | Nov-2009 | ಬಹುಮಾನಿತರ ಘೋಷಣೆ |
| ಹಂತ 4 | Dec-2009 | ಬಹುಮಾನ ವಿತರಣಾ ಸಮಾರಂಭ(ಬಹುಮಾನ ವಿಜೇತರು ತಮ್ಮ ಪ್ರೊಜೆಕ್ಟ್‌ಗಳನ್ನು ಪ್ರಸ್ತುತ ಪಡಿಸತಕ್ಕದ್ದು) |

## Terms and Conditions

**Owners of Intellectual Property**

1. Work submitted by a teacher must have been developed or authorized by her / him alone, and not in conjunction with anyone else, except as permitted in Clause 2 below, or if the work has been developed by students as a part of assignments/projects during the implementation of the Unit/Lesson. By submitting the Entry Form, the teacher absolves Intel of any and all responsibility for any disputes arising in this regard.
2. Entries received from participants may incorporate text, images or other materials created by others provided that the Copyright and Fair use Guidelines specified in he Curriculum Binders of the Intel Teach to the Future Program are strictly adhered to, and an accurate citation to the quoted or copied material is included.
3. An entry will remain the property of the submitting teachers However, Intel will have an irrevocable license, beginning with the submission of the entry and continue to share all or a part of the entry, as it is initially or as it may be modified or improved by persons or organizations authorized by Intel with other teachers and institutions for educational purposes, No Participant, or the institution she/he belongs to, will be entitled to receive any compensation or benefit from Intel in connection with such use, and will have to claim, against Intel for Intel's use of the material for educational purposes.

**Disqualification:**

4. Evaluation Team may disqualify any entry if it is not complete in all respects or if it has not been submitted in time, or it there is a violation of any of the legibility criteria or any of the Terms and Conductions specified herein.

**Awards Terms**

5. The evaluation Team will selected the top scoring entries based on the relative merits of the entries. The decision of the Evaluation Team shall be final and binding on all participants and shall not be subject to review.